ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**37(44)**
ಸದಸ್ಯರ ಹೆಸರು	:	ಶ್ರೀ. ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	:	07.12.2020
ಉತ್ತರಿಸುವ ಸಚಿವರು	:	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ಪ್ರೌಢಶಾಲಾ ವಿಭಾಗದ ಯಾವ ಯಾವ ವಿಷಯಗಳಲ್ಲಿ ವಿಷಯ ಪರಿವೀಕ್ಷಕರ (ಸಬ್ಜೆಕ್ಟ್ ಇನ್ಸ್‌ಪೆಕ್ಟರ್) ಹುದ್ದೆಗಳನ್ನು ಸೃಜಿಸಲಾಗಿದೆ; (ವಿಷಯವಾರು ವಿವರಗಳನ್ನು ಒದಗಿಸುವುದು)</td><td>
<table>
<tr><td>ಕಛೇರಿ</td><td colspan="5">ವಿಷಯ ಪರಿವೀಕ್ಷಕರು</td></tr>
<tr><td>ಉಪನಿರ್ದೇಶಕರ ಕಛೇರಿ</td><td>ಕನ್ನಡ</td><td>ಇಂಗ್ಲೀಷ್</td><td>ಪಿಸಿಎಂ</td><td>ಸಿಬಿಝಡ್</td><td>ಕಲಾ</td></tr>
<tr><td>ವಿಭಾಗೀಯ ವಿಷಯ ಪರಿವೀಕ್ಷಕರು (ಬೆಂಗಳೂರು ಮೈಸೂರು, ಬೆಳಗಾವಿ, ಕಲ್ಬುರ್ಗಿ</td><td>ಉರ್ದು</td><td>ಸಂಸ್ಕೃತ</td><td>ಹಿಂದಿ</td><td>ಸಂಗೀತ, ನೃತ್ಯ ನಾಟಕ</td><td></td></tr>
</table>
</td></tr>
<tr><td>ಆ.</td><td>ಇದುವರೆವಿಗೂ ಹಿಂದಿ ವಿಷಯ ಪರಿವೀಕ್ಷಕರ ಹುದ್ದೆ ಸೃಜಿಸದಿರುವುದು ಸರ್ಕಾರಕ್ಕೆ ಗಮನಕ್ಕೆ ಬಂದಿದೆಯೇ;</td><td>ವಿಭಾಗೀಯ ಮಟ್ಟದಲ್ಲಿ ಹಿಂದಿ ವಿಷಯ ಪರಿವೀಕ್ಷಕರ ಹುದ್ದೆಯನ್ನು ಸೃಜಿಸಲಾಗಿರುತ್ತದೆ.</td></tr>
<tr><td>ಇ.</td><td>ಹಾಗಿದ್ದಲ್ಲಿ, ಸದರಿ ಹುದ್ದೆಗಳನ್ನ ಸೃಜಿಸದಿರಲು ಕಾರಣಗಳೇನು; (ವಿವರ ನೀಡುವುದು)</td><td rowspan="2">ಇಡಿ 198 ಎಸ್‌ಓಹೆಚ್ 2017ರ ಕಡತದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರ ಕಛೇರಿಗಳಲ್ಲಿ ಹಿಂದಿ ವಿಷಯ ಪರಿವೀಕ್ಷಕರ ಹುದ್ದೆಗಳನ್ನು ಮಂಜೂರು ಮಾಡಲು ಕೋರಿ ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಸದರಿಯವರು ಪ್ರಸ್ತುತ ಇರುವ ಆರ್ಥಿಕ ನಿರ್ಬಂದಗಳ ಹಿನ್ನೆಲೆಯಲ್ಲಿ ಪ್ರಸ್ತಾವನೆಯನ್ನು ಪರಿಗಣಿಸಲು ಸಾಧ್ಯವಿಲ್ಲವೆಂದು ತಿರಸ್ಕರಿಸುತ್ತಾರೆ.</td></tr>
<tr><td>ಈ</td><td>ಯಾವ ಕಾಲಮಿತಿಯಲ್ಲಿ ಸದರಿ ಹುದ್ದೆಗಳನ್ನು ಸೃಜಿಸಲು ಕ್ರಮ ಕೈಗೊಳ್ಳಲಾಗುವುದು?</td></tr>
</table>

ಸಂಖ್ಯೆ: ಇಪಿ 190 ಎಸ್‌ಓಹೆಚ್ 2020

(ಎಸ್. ಸುರೇಶ್ ಕುಮಾರ್)
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ ಸಕಾಲ ಸಚಿವರು